ಕರ್ನಾಟಕ ಸರ್ಕಾರ ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ **57**)

ನಮೂನೆ ಸಂಖ್ಯೆ 4

## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಿಂಧನೂರು.

### ಸಿ.ಸಿ.ನಂ.637/2025

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ಶೇಖರಪ್ಪ** | | |
| **ತಂದೆಃಹೆಸರು** | **ಮುದುಕಪ್ಪ** | **ಪಿಡಬ್ಲೂಃ** | **1** |
| **ವಯಸ್ಸು** | **53 ವರ್ಷ** | **ಸಿಡಬ್ಲೂಃ** | **1** |
| **ಉದ್ಯೋಗಃ** | **ವ್ಯವಸಾಯ** | | |
| **ವಾಸ ಸ್ಥಳಃ** | **ಪರಮೇಶ್ವರ ಕ್ಯಾಂಪ್.** | | |

**ದಿನಾಂಕ 05-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃಃ**

ಚಾಸಾ-6 ನನ್ನ ಮಗ. ಮೃತ ಹುಸೇನಮ್ಮ ನನ್ನ ಹೆಂಡತಿ. ಸುಮಾರು 1 ವರ್ಷದ ಹಿಂದೆ ನನ್ನ ಹೆಂಡತಿ ಹುಸೇನಮ್ಮ ರವರು ಬೈಕಿನಲ್ಲಿ ನನ್ನ ಮಗ ಚಾಸಾ-6 ರವರೊಂದಿಗೆ ಹಿಂದೆ ಕುಳಿತುಕೊಂಡು ಸಿಂಧನೂರು ಆಸ್ಪತ್ರೆಯಿಂದ ನಮ್ಮ ಪರಮೇಶ್ವರ ದಿನ್ನಿಗೆ ಬರುವಾಗ ಅರಗಿನ ಮರದಹತ್ತಿರ ಅವರಿಗೆ ಒಂದು ಲಾರಿ ಗುದ್ದಿ, ನನ್ನ ಹೆಂಡತಿ ಮೃತಪಟ್ಟಿದ್ದಳು, ನನ್ನ ಮಗ ಬಸವರಾಜನಿಗೆ ಗಾಯಗಳಾಗಿದ್ದವು. ಸದರಿ ವಿಚಾರವನ್ನು ಚಾಸಾ-6 ರವರು ನನಗೆ ತಿಳಿಸಿದ್ದರು. ನಾನು & ಇತರರು ಅಪಘಾತ ಸ್ಥಳಕ್ಕೆ ಬಂದು ನೋಡಲಾಗಿ ಅದು ನಿಜವಿತ್ತು. ನಾನು ಹೋದಾಗ ಲಾರಿ ಚಾಲಕ ಸ್ಥಳದಲ್ಲಿರಲಿಲ್ಲ, ಆತನ ಹೆಸರು ದಿಲಿಪ್ ಕುಮಾರ್ ಎಂದು ತಿಳಿಸಿದ್ದರು. ಅಪಘಾತ ಲಾರಿ ಚಾಲಕನ ತಪ್ಪಿನಿಂದಲೇ ಆಗಿತ್ತು. ನಂತರ ನಾನು ಪೋಲೀಸರಿಗೆ ದೂರು ಕೊಟ್ಟಿದ್ದೆ.

ಸಾಕ್ಷಿಗೆ ದೂರನ್ನು ತೋರಿಸಲಾಗಿ ಸಾಕ್ಷಿಯು ದೂರನ್ನು & ಅದರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ದೂರನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು. ಸಾಕ್ಷಿಯು 2 ಫೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-2 &

3 ಎಂದು ಗುರುತಿಸಲಾಯಿತು. ಸಾಕ್ಷಿಯು ವಾಹನಗಳ ಫೋಟೋವನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-4 & 5 ಎಂದು ಗುರುತಿಸಲಾಯಿತು.

ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಆತನೇ ಆ ದಿನ ಲಾರಿಯನ್ನು ಓಡಿಸುತ್ತಿದ್ದ. ಇದೇ ಮೊದಲನೇ ಬಾರಿಗೆ ಆರೋಪಿಯನ್ನು ಈ ದಿನ ನ್ಯಾಯಾಲಯದ ಮುಂದೆ ನೋಡುತ್ತಿದ್ದೇನೆ, ಈ ಮೊದಲು ಆತನನ್ನು ನೋಡಿಲ್ಲ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು, ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.)**

**<u>ಪಾಟೀ ಸವಾಲುಃಃ ಮಾನ್ಯ ಸ.ಸ.ಅ. ರವರಿಂದಃಃ</u>**

ಆರೋಪಿಯ ಹೆಸರು ದಿಲಿಪ್ ಕುಮಾರ್ ಅಲ್ಲ, ಆತನ ಹೆಸರು ದಿಲ್ಜಿತ್ ಕುಮಾರ್ ಚೌಧ್ರಿ ಎಂದರೆ ಸರಿ. ಸ್ಥಳದಲ್ಲಿ ನೀವು ಆ ದಿನ ಆರೋಪಿಯನ್ನು ಸ್ಥಳದಲ್ಲಿಯೇ ನೋಡಿದ್ದಿರಿ ಎಂದರೆ ಸರಿ.

**<u>ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ</u>**

1. ನಾನು ಮನೆ ಬಿಟ್ಟಾಗ ಸಮಯ 1-30 ಆಗಿತ್ತು. ನಾನು ಜಾಗಕ್ಕೆ ಬಂದಾಗ ಅಲ್ಲಿ ಯಾರೂ ಇರಲಿಲ್ಲ. ಅಲ್ಲಿ ಓಡಾಡುವ ವಾಹನಗಳನ್ನು ಬಿಟ್ಟರೆ ಬೇರೆ ವಾಹನಗಳು ಇರಲಿಲ್ಲ. ನಾನು ನಮ್ಮ ಊರಿನಿಂದ ನೇರವಾಗಿ ಆಸ್ಪತ್ರೆಗೆ ಬಂದಿದ್ದೆ. ಆಸ್ಪತ್ರೆಗೆ ನಮ್ಮ ಮಾನ್ವಿ ವಕೀಲರು ಬಂದಿದ್ದರು. ಅಂತ್ಯಕ್ರಿಯೆ ಮುಗಿಯುವವರೆಗೂ ನೀವು ಮೃತದೇಹದ ಜೊತೆಗೆ ಶವಾಗಾರದಲ್ಲಿದ್ದಿರಿ ಎಂದರೆ ಸರಿ.
2. ಮಾನವಿ ವಕೀಲರು ಸಹಿ ಮಾಡು ಎಂದು ಹೇಳಿದ್ದರಿಂದ ನೀವು ಸಹಿ ಮಾಡಿದ್ದಿರಿ ಎಂದರೆ ಸರಿ. ಎಲ್ಲಾ ಮಾಹಿತಿ ಮಾನ್ವಿ ವಕೀಲರಿಗೆ ಇದೆ, ನನಗೆ ಇಲ್ಲ ಎಂದರೆ ಸರಿ. ಮಾನ್ವಿ ವಕೀಲರು ಏನು ಬರೆದುಕೊಂಡರು ಎಂದು ನನಗೆ ಗೊತ್ತಿಲ್ಲ. ನೀವು ಇದೇ ಮೊದಲನೆ ಬಾರಿಗೆ ನ್ಯಾಯಾಲಯದ ಮುಂದೆ ಆರೋಪಿಯನ್ನು ನೋಡುತ್ತಿದ್ದೀರಿ ಎಂದರೆ ಸರಿ.
3. ನನಗೆ ಲಾರಿ ಸಂಖ್ಯೆ ಗೊತ್ತಿಲ್ಲ. ಆ ದಿನ ಪೋಲೀಸ್ ಠಾಣೆಗೆ ಹೋಗಿದ್ದನ್ನು ಬಿಟ್ಟರೆ ಬೇರೆ ದಿನ ನಾನು ಹೋಗಿಲ್ಲ. ಆ ದಿನ ಬಿಟ್ಟರೆ ನಾನು ಬೇರೆ ದಿನ ಸ್ಥಳಕ್ಕೆ ಹೋಗಿಲ್ಲ.
4. ನನ್ನ ಮೊಬೈಲ್ ನಂ.9731632475, ನನ್ನ ಮಗನ ಫೋ. ನಂ.7204561452. ಈ ಮೊ.ನಂಬರ್‌ಗಳನ್ನು ಇದೇ ಮೊದಲನೇ ಬಾರಿಗೆ ಹೇಳುತ್ತಿದ್ದೀರಿ, ಈ ಹಿಂದೆ ಹೇಳಿಲ್ಲ ಎಂದರೆ ಸಾಕ್ಷಿಯು ಠಾಣೆಯಲ್ಲಿ ಹೇಳಿದ್ದೆ ಎನ್ನುತ್ತಾರೆ. ನೀವು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

5. ಲಾರಿ ಚಾಲಕನ ಹೆಸರು, ತಂದೆ ಹೆಸರು ಏನು ಎಂದರೆ ಸಾಕ್ಷಿಯು ದಿಲಿಪ್ ಕುಮಾರ್ ಎನ್ನುತ್ತಾರೆ.

6. ನೀವು ಹೇಳಿದಂತೆ ಯಾವುದೇ ಅಪಘಾತ ಆಗಿಲ್ಲ, ನೀವು ಘಟನಾ ಸ್ಥಳಕ್ಕೆ ಹೋಗಿಲ್ಲ, ಯಾವುದೇ ದೂರನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಪರಿಹಾರದ ಹಣ ಸಿಗಲಿ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಸಿಂಧನೂರು.**